RNU AIR DHARWAD

FEBRUARY 12, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಹಾವೇರಿ–ಗದಗ, ಲೋಕಸಭಾ ಕ್ಷೇತ್ರದ ಸಂಸದ, ಬಸವರಾಜ ಬೊಮ್ಮಾಯಿ, ಹೊಸ ದಿಲ್ಲಿಯಲ್ಲಿ, ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ ಅವರನ್ನು ಭೇಟಿ ಮಾಡಿ, ಭೂ ಸ್ವಾಧೀನ ಸಮಸ್ಯೆಯಿಂದ, ದೀರ್ಘಕಾಲ ಬಾಕಿ ಉಳಿದ, ಶಿವಮೊಗ್ಗ, ರಾಣಿಬೆನ್ನೂರು ರೈಲು ಮಾರ್ಗದ ಕಾಮಗಾರಿ, ಶೀಘ್ರ ಪೂರ್ಣಗೊಳಿಸುವಂತೆ, ಮನವಿ ಮಾಡಿದ್ದಾರೆ. ಯಲವಿಗಿ, ಗದಗ ಮಧ್ಯೆ ಹೊಸ ರೈಲು ಮಾರ್ಗ, ಗದಗ, ಕು ್ಟಗಿ ಮಧ್ಯೆ, ಹೊಸ ರೈಲು ಮಾರ್ಗದ ಸಮೀಕ್ಷೆ ಹಾಗೂ ನರೇಗಲ್ಲ, ಗಜೇಂದ್ರಗಡ ಮಾರ್ಗವಾಗಿ, ಹೊಸ ರೈಲು ಮಾರ್ಗಕ್ಕೆ, ಸಮೀಕ್ಷೆ ಕೈಗೊಳ್ಳುವಂತೆ, ಪ್ರಸ್ತಾವ ಸಲ್ಲಿಸಿದ್ದಾಗಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಭಾರತೀಯ ರೇಲ್ವೆ, ತನ್ನ ಅಧಿಕೃತ 'ಆಲ್–ಇನ್–ಒನ್' ಸೂಪರ್ ಅಪ್ಲಿಕೇಶನ್, ರೇಲ್ ಒನ್ (RailOne) ಆ್ಯಪ್ ಬಿಡುಗಡೆ ಮಾಡಿದೆ. ಈ ಆ್ಯಪ್ ಪ್ರಯಾಣಿಕರಿಗೆ, ಹಲವಾರು ರೇಲ್ವೆ ಸೇವೆಗಳನ್ನು ಪಡೆಯಲು, ಸುಲಭ ಮತ್ತು ಅನುಕೂಲಕರ ಡಿಜಿಟಲ್ ವೇದಿಕೆಯನ್ನು ಒದಗಿಸುತ್ತದೆ. ಹಲವಾರು ಪ್ರಯಾಣಿಕ ಸೌಲಭ್ಯಗಳನ್ನು, ಒಂದೇ ಅಪ್ಲಿಕೇಶನ್'ನಲ್ಲಿ ಒಳಗೊಂಡಿದ್ದು, ರೇಲ್ವೆ ಪ್ರಯಾಣವನ್ನು ಹೆಚ್ಚು ಸಕ್ಷಮ, ವೇಗವರ್ಧಿತ ಮತ್ತು ಸುಗಮ ಗೊಳಿಸುತ್ತದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ಬ್ಯಾಂಕುಗಳ ಗ್ರಾಹಕರು, ತಮ್ಮ ಖಾತೆಗಳಿಗೆ, ಕೆ.ವೈ.ಸಿ. ಮರು ಜೋಡಣೆ ಮಾಡಬೇಕು ಹಾಗೂ, 14 ಅಂಕಿಗಳ ಸಿ.ಕೆ.ವೈ.ಸಿ. ಐ.ಡಿ.ಯನ್ನು ಬ್ಯಾಂಕುಗಳ ಮೂಲಕ ಪಡೆದುಕೊಳ್ಳಬೇಕು ಎಂದು, ಭಾರತೀಯ ರಿಸರ್ವ್ ಬ್ಯಾಂಕ್'ನ, ಸಹಾಯಕ ಮಹಾ ಪ್ರಬಂಧಕ, ಬಬುಲ್ ಬೋಡ್ರೋಲೈ ಕೋರಿದ್ದಾರೆ. ಚನ್ನಪಟ್ಟಣ ತಾಲೂಕು, ನೆಲಮಾಕನ ಹಳ್ಳಿಯಲ್ಲಿ, ಬೆಂಗಳೂರು ದಕ್ಷಿಣ ಜಿಲ್ಲೆ, ಮಾರ್ಗದರ್ಶಿ ಬ್ಯಾಂಕ್ ಸಹಯೋಗದಲ್ಲಿ, ಹಣಕಾಸು ಸಾಕ್ಷರತಾ ಸಪ್ತಾಹಕ್ಕೆ, ಚಾಲನೆ ನೀಡಿ, ಮಾತನಾಡಿದರು. ಆನ್ಲೈನ್ ಆರ್ಥಿಕ ವ್ಯವಹಾರಗಳನ್ನು ಕೈಗೊಳ್ಳುವಾಗ, ಸಾರ್ವಜನಿಕರು, ಬ್ಯಾಂಕ್ ಗ್ರಾಹಕರು, ಡಿಜಿಟಲ್ ವಂಚನೆಗಳ ಬಗ್ಗೆ, ಜಾಗ್ರತೆವಹಿಸಬೇಕು ಎಂದರು.

<><><>

ಕೇಂದ್ರದ, ವಿಕಸಿತ ಭಾರತ ರೂಪುರೇಷೆಯ, ಜನಪರ ಮುಂಗಡ ಪತ್ರದ ಕುರಿತು, ಬೆಳಗಾವಿಯಲ್ಲಿ, ಬಿಜೆಪಿ ಆಯೋಜಿಸಿದ್ದ, ಮಹಿಳಾ ಸಂವಾದ ಸಮಾವೇಶಕ್ಕೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕೇಂದ್ರ ಸರ್ಕಾರ, ಲಖಪತಿ ದೀದಿ ಯೋಜನೆ ಮೂಲಕ, ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದರು.

<><><>

ಬಿ.ವೈ. ವಿಜಯೇಂದ್ರ ಧ್ವನಿ 45 ಸೆಕೆಂಡುಗಳು

<><><>

ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಸಾಧಕ, ಪ್ರಭಾಕರ ಕೋರೆ ಅವರನ್ನು, ಬಿ.ವೈ. ವಿಜಯೇಂದ್ರ, ಗೌರವಿಸಿದರು.

<><><>

ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ, ರೈತಪರ ಯೋಜನೆಗಳ ಬಗ್ಗೆ, ಆಕಾಶವಾಣಿ ಮೂಲಕ, ಮಹತ್ವದ ಮಾಹಿತಿ ಬಿತ್ತರಗೊಳ್ಳುತ್ತಿದ್ದು, ಅರ್ಹ ರೈತರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಸದುಪಯೋಗ ಪಡೆದುಕೊಳ್ಳುವಂತೆ, ಕೃಷಿ ಇಲಾಖೆಯ, ಶಿವಮೊಗ್ಗ ಜಿಲ್ಲೆ, ಜಂಟಿ ನಿರ್ದೇಶಕ ಎಂ. ಕಿರಣಕುಮಾರ ಕೋರಿದ್ದಾರೆ. ಭಾನುವಾರ, 15ನೇ ತಾರೀಖು, ರೇಡಿಯೋ ಕಿಸಾನ್ ದಿವಸ್ ಆಚರಣೆ ಹಿನ್ನೆಲೆ, ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲೂಕು, ಹಳ್ಳಿಕೆರೆಯ ಕೃಷಿ ತರಬೇತಿ ಕೇಂದ್ರದಲ್ಲಿ, ರೈತರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಆಕಾಶವಾಣಿ ಭದ್ರಾವತಿ ಕೇಂದ್ರದ, ಕಾರ್ಯಕ್ರಮ ಮುಖ್ಯಸ್ಥ, ಎಸ್.ಆರ್.ಭಟ್ ಮಾತನಾಡಿ, 'ರೈತರ ಸಬಲೀಕರಣ; ಯುವರೈತರು ಹಾಗೂ ಆಧುನಿಕ ಕೃಷಿ ಪದ್ಧತಿ ಪ್ರೋತ್ಸಾಹಿಸುವ ಧ್ಯೇಯ'ದೊಂದಿಗೆ, ಈ ತಿಂಗಳ 15ನೇ ತಾರೀಖು, ರೇಡಿಯೋ ಕಿಸಾನ್ ದಿವಸ ಆಚರಿಸಲಾಗುತ್ತಿದೆ. 2004, ಫೆಬ್ರುವರಿ 15 ರಂದು, ಕಿಸಾನ್ ವಾಣಿ ಕಾರ್ಯಕ್ರಮ ಪ್ರಸಾರವನ್ನು, ಆಕಾಶವಾಣಿ ದೇಶವ್ಯಾಪಿ ಪ್ರಾರಂಭಿಸಿತು, ಎಂದರು. ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು ಜಿಲ್ಲೆಯ 15 ರೈತರನ್ನು ಗಣ್ಯರು ಸನ್ಮಾನಿಸಿದರು.

<><><>

ಚಾಮರಾಜನಗರ ಜಿಲ್ಲೆಯ, ಬುಡಕಟ್ಟು ಸಮುದಾಯಗಳಾದ, ಸೋಲಿಗ, ಜೇನುಕುರುಬ ಮತ್ತು ಕಾಡುಕುರುಬರ, ಸಮಾಜೋ–ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ, ಜೀವನೋಪಾಯ ಮತ್ತು ಸವಾಲುಗಳ ಬಗ್ಗೆ, ಜಿಲ್ಲಾಧಿಕಾರಿ ಶ್ರೀರೂಪ ಮಾಹಿತಿ ಹಂಚಿಕೊಂಡರು. ಕೇರಳದ ವೈನಾಡ್ ಜಿಲ್ಲೆಯ, ಸುಲ್ತಾನ್ ಬತ್ತೇರಿಯಲ್ಲಿ ನಡೆದ, 'ಆದಿವಾಸಿ ಜಗತ್ತಿನಲ್ಲಿ ಸ್ವಾವಲಂಬನೆಯ ಕಲ್ಪನೆಗಳು' ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ, ಅವರು ಮಾತನಾಡಿದರು. ವನವಾಸಿ ಬಂಧುಗಳ ಅಭಿವೃದ್ಧಿ ಮಾದರಿಗಳು, ಆಡಳಿತಾತ್ಮಕ ಅನುಭವ ಮತ್ತು ಸಮುದಾಯದ ಧ್ವನಿಗಳಿಂದ ರೂಪುಗೊಳ್ಳಬೇಕು, ಎಂದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿಯಲ್ಲಿ, ನಾಳೆಯಿಂದ ಮೂರು ದಿನಗಳ ಕಾಲ ನಡೆಯಲಿರುವ, 'ಹಂಪಿ ಉತ್ಸವ'ದ ಹಿನ್ನೆಲೆ, ನಿನ್ನೆ ಸಂಜೆ, ಹಂಪಿಯ ಸ್ನಾನಘಟ್ಟದ, ತುಂಗಭದ್ರಾ ತಟದಲ್ಲಿ, ವೈಭವದ ತುಂಗಭದ್ರಾ ಆರತಿ ಕಾರ್ಯಕ್ರಮ ಜರುಗಿತು. ಜಿಲ್ಲಾಧಿಕಾರಿ, ಕವಿತಾ ಮನ್ನಿಕೇರಿ, ಶ್ರೀ ವಿರೂಪಾಕ್ಷೇಶ್ವರ ಮತ್ತು ಶ್ರೀ ಪಂಪಾಂಬಿಕೆ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿ, ತುಂಗಭದ್ರಾ ಆರತಿಗೆ, ಚಾಲನೆ ನೀಡಿದರು. ಸಿಡಿ ಮದ್ದಿನ ಪ್ರದರ್ಶನ, ಬಾನಂಗಳದಲ್ಲಿ ವಿಶೇಷ ಚಿತ್ತಾರ ಮೂಡಿಸಿತು.

<><><>

ಬಳ್ಳಾರಿ ಜಿಲ್ಲೆ, ಐತಿಹಾಸಿಕ ಕಂಪ್ಲಿ ಪಟ್ಟಣದಲ್ಲಿ, ಎರಡು ದಿನಗಳ ಕಂಪ್ಲಿ ಉತ್ಸವ, ಇಂದು ಸಮಾರೋಪಗೊಳ್ಳಲಿದೆ. ಸೋಮಪ್ಪನ ಕೆರೆಯಲ್ಲಿ ತನ್ನಿಮಿತ್ತ ನಡೆದ, ತುಂಗಭದ್ರಾ ಆರತಿ ಮಹೋತ್ಸವ ಹಾಗೂ ಬಾಗಿನ ಸಮರ್ಪಣೆ ಕಾರ್ಯಕ್ರಮದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹಾಗೂ ಕಂಪ್ಲಿ ಶಾಸಕ ಜೆ.ಎನ್.ಗಣೇಶ ಪಾಲ್ಗೊಂಡಿದ್ದರು. ಕೆರೆಯ ಆವಾರದಲ್ಲಿ ಆಕರ್ಷಕ ತೇಲುವ ದೀಪಗಳ ಸಾಲು ಮನ ಸೆಳೆಯಿತು.

<><><>

ಕೊಡಗು ಜಿಲ್ಲೆ, ಬೆಸಗೂರು ಗ್ರಾಮದಲ್ಲಿ, ಅರಣ್ಯ ಇಲಾಖೆ, ಹುಲಿಯನ್ನು ಸೆರೆ ಹಿಡಿದಿದೆ. ಅಂದಾಜು 6 ವರ್ಷ ಪ್ರಾಯದ ಗಂಡು ಹುಲಿ ಎಂದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಗೋಪಾಲ ಮಾಹಿತಿ ನೀಡಿದ್ದಾರೆ. ಕಳೆದ 10 ದಿನಗಳಲ್ಲಿ, 7 ಹಸುಗಳನ್ನು ಕೊಂದು ಹಾಕಿದ್ದ ಹುಲಿಯನ್ನು ಸೆರೆಹಿಡಿಯುವಂತೆ, ಗ್ರಾಮಸ್ಥರು ಆಗ್ರಹಿಸುತ್ತಿದ್ದರು. ಸೆರೆ ಹಿಡಿದ ಹುಲಿಯನ್ನು ಬನ್ನೇರುಘಟ್ಟ ಅರಣ್ಯ ಪ್ರದೇಶಕ್ಕೆ, ಸ್ಥಳಾಂತರಿಸಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.